503	ವಿ.ಬಾಡಗ	ಬಿ.ಡಿ.ವಸಂತ,	500–00
504	ವಿ.ಬಾಡಗ	ಎಂ.ಎ.ರಘು,	500–00
505	ವಿ.ಬಾಡಗ	ಎಂ.ಎಂ.ದೇವಯ್ಯ,	750–00
506	ವಿ.ಬಾಡಗ	ಬಿ.ಡಿ.ಯಮುನಾ,	450–00
507	ದೇವನೂರು	ಎಂ.ಕೆ.ಗಣಪತಿ ಬಿನ್ ಎಂ.ಪಿ.ಕಾಳಪ್ಪ,	2575–00
	ಒಟ್ಟು ಮೊತ್ತ		**3,62,495–00**

141(57) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯಲ್ಲಿ "ಪುಡ್ ಪಾರ್ಕ್" ಹಾಗೂ "ಗ್ರಾನೈಟ್ ಪಾರ್ಕ್" ಹಾಗೂ "ಗ್ರಾನೈಟ್ ಪಾರ್ಕ್"ನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ:

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಚಾಮರಾಜನಗರ ಜಿಲ್ಲೆಯಲ್ಲಿ ಯಾವುದೇ ಪುಡ್ ಪಾರ್ಕ್ ಅಥವಾ ಗ್ರಾನೈಟ್ ಪಾರ್ಕ್ ಸ್ಥಾಪಿಸುವ ಯೋಜನೆ ಸದ್ಯಕ್ಕೆ ಸರ್ಕಾರಕ್ಕೆ ಇರುವುದಿಲ್ಲ.

ಆ) ಖಾಸಗಿ ಉದ್ಯಮಗಳು ಚಾಮರಾಜನಗರ ಜಿಲ್ಲೆಯಲ್ಲಿ ಪುಡ್ ಪಾರ್ಕ್ ಅಥವಾ ಗ್ರಾನೈಟ್ ಪಾರ್ಕ್ ಸ್ಥಾಪಿಸಲು ಮುಂದೆ ಬಂದಲ್ಲಿ ಸರ್ಕಾರವು ಅಗತ್ಯ ಮೂಲಭೂತ ಸೌಲಭ್ಯ ಹಾಗೂ ರಿಯಾಯಿತಿಗಳನ್ನು ಕೈಗಾರಿಕಾ ನೀತಿಯ ಅನುಸಾರ ನೀಡಲಾಗುವುದು.

142(58) ಶ್ರೀ ಧ್ರುವನಾರಾಯಣ್. ಆರ್ (ಸಂತೇಮರಳ್ಳಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲುಷಿತ ನೀರಾ ಸೇವನೆಯಿಂದ ಬಡಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಇದರಿಂದಾಗಿ ಅಬಕಾರಿ ಇಲಾಖೆಗೆ ನಷ್ಟವಾಗುತ್ತಿಲ್ಲವೇ:

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.